## ಡಬ್ಬಿಂಗ್ ಧಾರಾವಾಹಿಗಳಿಗಿದು ಕಾಲ?

ಕನ್ನಡ ಧಾರಾವಾಹಿಗಳ ಯುಗ ಮುಗಿದು ಡಬ್ಬಿಂಗ್ ಧಾರಾವಾಹಿಗಳ ಕಾಲ ಆರಂಭವಾಗಿದೆ. ಒಂದು ಕಾಲದಲ್ಲಿ ತನ್ನ ಧಾರಾವಾಹಿಗಳಿಂದ ಹೆಸರುವಾಸಿಯಾಗಿದ್ದ ಕಲರ್ಸ್ ಕನ್ನಡ ಈಗ ಅರ್ಥಹೀನ ಧಾರಾವಾಹಿಗಳನ್ನೇ ಹೆಚ್ಚು ಬಿತ್ತರಿಸುತ್ತಿದೆ ಎಂದು ಅನ್ನಿಸುತ್ತಿದೆ. 'ರಾಮಾಚಾರಿ'ಯನ್ನು ಅನಗತ್ಯವಾಗಿ ಎಳೆಯುತ್ತಿದ್ದಾರೆ. 'ದೃಷ್ಟಿಬೊಟ್ಟು' ಧಾರಾವಾಹಿಯಲ್ಲಿ ಕಥೆಯೇ ಇಲ್ಲ.

'ಭಾಗ್ಯಲಕ್ಷ್ಮೀ'ಯಲ್ಲಿ ಸುನಂದಾ ಗಂಡನ ಮನೆ ಬಿಟ್ಟು ಮಗಳ ಮನೆಯಲ್ಲಿರಲು ಕಾರಣವೇನು? ಕುತೂಹಲ ಹುಟ್ಟಿಸಿದ 'ವಧು'ವಿನ ಕಾಲ ಬದಲಾಗಿದೆ. 'ಯಜಮಾನ'ವನ್ನು ಒಂದು ಗಂಟೆ ಪ್ರಸಾರ ಮಾಡುವ ಔಚಿತ್ಯವೇನು? ರಿಯಾಲಿಟಿ ಶೋನಲ್ಲಿ ರಿಯಾಲಿಟಿ ಇಲ್ಲ. 'ಮಜಾ ಟಾಕೀಸ್'ನಲ್ಲಿ ಯೋಗರಾಜ್ ಭಟ್ ಇದ್ದೂ ಇಲ್ಲದಂತಾಗಿದೆ.

—ಮುಕ್ತಾ ಸಿ.ಎನ್.

## ಅಸಂಬದ್ಧ ಸನ್ನಿವೇಶಗಳು

ಝೀ ಕನ್ನಡದ 'ಲಕ್ಷ್ಮೀ ನಿವಾಸ'ದಲ್ಲಿ ಜಾಹ್ನವಿ, ತಡ ರಾತ್ರಿಯ ವೇಳೆ ತಿಳಿಯದ ರೀತಿ ಮನೆಗೆ ಭೇಟಿ ನೀಡುತ್ತಾಳೆ. ಮೊದಲು ಮನೆಯ ಮುಂಬಾಗಿಲಲ್ಲಿ ಒಳ ಪ್ರವೇಶಿಸಲು ಹೆಜ್ಜೆ ಇಟ್ಟವಳು ಹಿಂದಕ್ಕೆ ಸರಿಯುತ್ತಾಳೆ. ಬಳಿಕ ಮಲಗಿದವರು ಎಚ್ಚೆತ್ತುಕೊಳ್ಳಬಹುದು ಎಂದು ಹಿಂದಿನ ಬಾಗಿಲ ಮೂಲಕ ಒಳ ಪ್ರವೇಶಿಸುತ್ತಾಳೆ. ಬಾಗಿಲುಗಳಿಗೆ ಒಳಗಿಂದ ಚಿಲಕ ಹಾಕದೆ ರಾತ್ರಿ ಮಲಗುತ್ತಾರೆಯೇ? ಕೆಲವೇ ನಿಮಿಷಗಳ ಬಳಿಕ ಜಯಂತ್ ಆಗಮಿಸಿದಾಗ ಮುಂಬಾಗಿಲ ಚಿಲಕ ಹಾಕಿರುತ್ತದೆ.

—ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಜವಾಬ್ದಾರಿ ಬೇಡವೇ?

ಝೀ ಕನ್ನಡ ವಾಹಿನಿಯ 'ಅಮೃತಧಾರೆ'ಯ ಒಂದು ಸಂಚಿಕೆಯಲ್ಲಿ ಗರ್ಭಿಣಿಯಾದ ನಾಯಕಿಯ ಅಪೇಕ್ಷೆಯಂತೆ ನಾಯಕ ತನ್ನ ದ್ವಿಚಕ್ರ ವಾಹನದಲ್ಲಿ ಅವಳನ್ನು ಕೂರಿಸಿಕೊಂಡು ಸಂಚರಿಸುತ್ತಾನೆ. ಈ ಸಂದರ್ಭದಲ್ಲಿ ಇಬ್ಬರೂ ಹೆಲ್ಮೆಟ್ ಧರಿಸಿರುವುದಿಲ್ಲ. ಹೆಲ್ಮೆಟ್ ಇಲ್ಲದೆ ಪ್ರಯಾಣ ಅಪಾಯ ಅಲ್ಲವೇ? ಅದು ಕಾನೂನು ವಿರುದ್ಧ ಕೂಡ.

ನಾಯಕಿ ಶಿಕ್ಷಕಿ. ಎಲ್ಲರಿಗೂ ಬುದ್ಧಿ ಹೇಳುವ ಆಕೆ, ಅಪಾರ ತಿಳಿವಳಿಕೆ ಇರುವ ನಾಯಕ ಹೀಗೆ ಮಾಡುವುದು ಯಾವ ಸಂದೇಶ ನೀಡುತ್ತದೆ? ನಟರ ಮುಖ, ಹಾವಭಾವ ಕಾಣಬೇಕೆಂದು ನಿರ್ದೇಶಕರು ಈ ರೀತಿ ಮಾಡಿದ್ದರೂ ಅದು ತಪ್ಪು. ಇಂತಹ ಕಾನೂನು ವಿರೋಧಿ ನಡೆಗಳನ್ನು ತೋರಿಸಿ ಯುವಜನರಿಗೆ ತಪ್ಪು ಹಾದಿ ತೋರದಿರಲಿ. 'ಹೆಲ್ಮೆಟ್ ರಹಿತ ಚಾಲನೆ ಅಪಾಯಕಾರಿ ಮತ್ತು ಕಾನೂನು ಬಾಹಿರ' ಎಂದ ಹಾಕಿದರೆ ಸಾಲದು.

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

ವಾರದ ಪತ್ರ

## ರಿಯಾಲಿಟಿ ಶೋಗಳೇಕೆ ಜನಪ್ರಿಯ?

ಕಿರುತೆರೆ ಲೋಕದಲ್ಲಿ ರಿಯಾಲಿಟಿ ಶೋಗಳು ಸಾಕಷ್ಟು ಖ್ಯಾತಿಯನ್ನು ಪಡೆದಿವೆ. ಇಂದಿನ ದಿನಗಳಲ್ಲಿ ರಿಯಾಲಿಟಿ ಶೋ ಅರ್ಥ, ಉದ್ದೇಶ, ನಡವಳಿಕೆ, ಗುರಿ ಎಲ್ಲವೂ ಬದಲಾಗಿವೆ ಎನ್ನುವುದನ್ನು ಗಮನಿಸಬಹುದು. ಡ್ರಾಮಾ ಸೃಷ್ಟಿ ಮಾಡೋದು, ವಿವಾದಗಳನ್ನು ಹುಟ್ಟುಹಾಕೋದು, ಸಣ್ಣ ವಿಷಯವನ್ನು ಅತಿಯಾಗಿ ಬಿಂಬಿಸುವುದು, ಸ್ಪರ್ಧಿಗಳ ವೈಯಕ್ತಿಕ ಬದುಕನ್ನು ತೆರೆಯ ಮೇಲೆ ವಿಜೃಂಭಿಸುವುದು, ಇವೆಲ್ಲಾ ರಿಯಾಲಿಟಿ ಶೋಗಳ ಭಾಗವೇ ಆಗಿದೆ.

ಕೆಲವೇ ತಿಂಗಳಲ್ಲಿ ಶೋ ಮುಗಿಯುತ್ತದೆ. ವೀಕ್ಷಕರು ಅದೇ ಕಾರಣಕ್ಕೆ ಅದನ್ನು ಇಷ್ಟಪಡುತ್ತಾರೆ. ಇಲ್ಲಿ ಸಾಮಾನ್ಯರೂ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಸಿಗುತ್ತದೆ. ಎಷ್ಟೋ ಸ್ಪರ್ಧಿಗಳು ರಿಯಾಲಿಟಿ ಶೋಗಳ ಮೂಲಕ ಬೆಳವಣಿಗೆಯನ್ನು ಸಾಧಿಸಿದ್ದಾರೆ.

—ವೀಣಾ ಶಂಕರ್, ಬೆಂಗಳೂರು



## ಬ್ಯಾಚುಲರ್ಸ್‌ಗೆ ಬೇಕು ಮೂಗುದಾರ

ಝೀ ಕನ್ನಡದ 'ಭರ್ಜರಿ ಬ್ಯಾಚುಲರ್ಸ್' ಎಂಬ ಕಾರ್ಯಕ್ರಮದ ನಿರೂಪಕ ನಿರಂಜನ್ ದೇಶಪಾಂಡೆ, ಹುಲಿ ಕಾರ್ತಿಕ್ ಎಂಬ ಸ್ಪರ್ಧಿಯ ಜೊತೆ ಮಾತನಾಡುವಾಗ ಅಶ್ಲೀಲ, ಅಸಭ್ಯ ಪದಗಳನ್ನು ಬಳಸಿದ್ದಾರೆ. ಇದರಿಂದ ಹುಲಿ ಕಾರ್ತಿಕ್ ಗಾಸಿಗೊಂಡರೂ ಅದನ್ನು ತೋರ್ಪಡಿಸಲಿಲ್ಲ. ಅಲ್ಲಿ ಕುಳಿತಿದ್ದ ಮಹಿಳಾ ಸ್ಪರ್ಧಿಗಳು ನಿರೂಪಕನ ಮೂರನೇ ದರ್ಜೆಯ ಅಸಭ್ಯ ಮಾತುಗಳಿಗೆ ಬಿದ್ದೂ ಬಿದ್ದು ನಕ್ಕಿದ್ದು ವಿಪರ್ಯಾಸ. ಇಂತಹ ಮಾತುಗಳನ್ನು ಹಾಸ್ಯದ ನೆಪದಲ್ಲಿ ವೈಭವೀಕರಿಸುತ್ತಿರುವ 'ಭರ್ಜರಿ ಬ್ಯಾಚುಲರ್ಸ್' ಕಾರ್ಯಕ್ರಮಕ್ಕೆ ಕಡಿವಾಣ ಬೇಕಾಗಿದೆ.

—ಪಿ.ಜೆ. ರಾಘವೇಂದ್ರ, ಮೈಸೂರು

## ಅಣಕದ ಮಹಾಸಂಗಮ!

ಝೀ ಕನ್ನಡದ 'ಸರಿಗಮಪ' ಶೋನ ಪ್ರತಿ ಸೀಸನ್‌ನಲ್ಲೂ 'ಮಹಾಸಂಗಮ' ಎಂಬ ಸಂಚಿಕೆ ಇದ್ದೇ ಇರುತ್ತದೆ. ಈ ಬಾರಿಯ ಮಹಾಸಂಗಮ ಸಂಚಿಕೆಯಲ್ಲಿ ಕಲಾವಿದರು 'ಸರಿಗಮಪ' ತೀರ್ಪುಗಾರರ ಹಾಗೂ ಸ್ಪರ್ಧಿಗಳ ಅನುಕರಣೆಯನ್ನು ಮಾಡಿದರು. ತಮ್ಮ ಹಾವಭಾವವನ್ನು ಮತ್ತೊಬ್ಬರು ಅನುಕರಣೆ ಮಾಡಿ ತೋರಿಸಿದಾಗ ಸಿಗುವ ಖುಷಿಯೇ ಬೇರೆ. ಆದರೆ ಅನುಕರಣೆ ಮಾಡುತ್ತಿರುವವರು ಅವರ ಫೋಟೊ ಪ್ರದರ್ಶಿಸುವುದು ಅನಗತ್ಯ. ಮಹಾಸಂಗಮದ ಕಲಾವಿದರು ನಮ್ಮನ್ನೆಲ್ಲ ನಗೆಗಡಲಲ್ಲಿ ತೇಲಿಸಿದ್ದು ಸತ್ಯ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಕಲಾನಿರ್ದೇಶಕನ ಶ್ರದ್ಧೆಗೆ ಅಭಿನಂದನೆ

ಝೀ ಕನ್ನಡದ 'ಸರಿಗಮಪ' ತುಂಬ ಚೆನ್ನಾಗಿ ಬರುತ್ತಿದೆ. ಅದರಲ್ಲೂ ದೇವರನಾಮದ ಸುತ್ತು ಬಹಳ ಚೆನ್ನಾಗಿತ್ತು. ಒಬ್ಬರಿಗಿಂತ ಒಬ್ಬರು ಸೊಗಸಾಗಿ ಹಾಡಿದರು. ಹಾಡಿನ ಜೊತೆಗೆ ಆ ದೇವರ ಸ್ವರೂಪವನ್ನು ವೇದಿಕೆಯ ಮೇಲೆ ತಂದಿದ್ದು ಅದ್ಭುತವಾಗಿತ್ತು. ವೇದಿಕೆ ಮೇಲೆ ಆ ದೇವರ ಸೆಟ್ ಹಾಕಿದ್ದು ಒಬ್ಬ ಮುಸ್ಲಿಂ ಯುವಕ ಎಂದು ತಿಳಿದು ಆಶ್ಚರ್ಯವಾಯಿತು. ಕಲಾ ನಿರ್ದೇಶಕನ ಶ್ರದ್ಧೆಗೆ ಹ್ಯಾಟ್ಸ್ ಆಫ್.

—ಜಯಂತಿ ಶಾಸ್ತ್ರಿ, ಮೈಸೂರು

ಝೀ ವಾಹಿನಿಯ 'ಸರಿಗಮಪ' ಕಾರ್ಯಕ್ರಮದ ದೈವೀ ಸ್ವರೂಪದ ಭಕ್ತಿ ಸುತ್ತು ವಿಶೇಷವಾಗಿತ್ತು. ವೀಕ್ಷಕರು ದೇವಾನುದೇವತೆಗಳ ದರ್ಶನ ಪಡೆದ ಹೆಮ್ಮೆಯ ಕ್ಷಣ ಅದಾಗಿತ್ತು. ಗಣಪತಿ, ರಾಘವೇಂದ್ರ ಸ್ವಾಮಿ, ಅಯ್ಯಪ್ಪ ಸ್ವಾಮಿ, ಶ್ರೀಸತ್ಯನಾರಾಯಣ, ಚಾಮುಂಡೇಶ್ವರಿ ಅಮ್ಮ, ಕೃಷ್ಣ, ಮಂಜುನಾಥ ಸ್ವಾಮಿ ಶೋನಲ್ಲಿ ಅವತರಿಸಿದ್ದರು.

—ಭಾರತೀ ಗಂಗಾಧರ್, ಬೆಂಗಳೂರು